ಏನೋ ಹೇಳಿ ಒಳಗೆ ಹೋದ್ರು.

ಕೆಲವೇ ನಿಮಿಷದಲ್ಲಿ ಪೊಲೀಸ್ ಬಂದ್ರು. ಎರಡು ಕಾರು, ಅದ್ರಲ್ಲಿ ಖುಷಿಯಿಂದ ಕೆಲಸ ಮಾಡೋ ನಾಲ್ಕು ಜನ ಇದ್ರು. ಅವ್ರು ನನ್ನ ಹಿಡ್ಕೊಂಡೋಗಿ ಜೈಲಿಗೆ ಹಾಕಿದ್ರು. ಮಾರನೇ ದಿನ ನಾನು ನ್ಯಾಯಾಲಯದಲ್ಲಿದ್ದೆ. ಎಲ್ಲಾನೂ ಬೇಗ ಬೇಗ ಮುಗಿಸಿಬಿಡ್ಬೇಕು ಅಂತ ಅವ್ರು ಎಷ್ಟು ಅವಸರದಲ್ಲಿದ್ರು ಅಂದ್ರೆ ನನಗೆ ಫೋನ್ ಮಾಡೋಕೂ ಕೊಡ್ಲಿಲ್ಲ, ವಕೀಲರ ಹತ್ರ ಮಾತಾಡೋಕೂ ಬಿಡ್ಲಿಲ್ಲ. ನನ್ಮೇಲಿದ್ದ ಅಪವಾದ ಬೇರೆಯವರ ಹೆಸರಲ್ಲಿ ಕೆಲಸ ಸೇರಲು ಪ್ರಯತ್ನಿಸಿದ್ದಕ್ಕಲ್ಲ, ಕಾನೂನಿಗೆ ವಿರುದ್ಧವಾಗಿ ಕೆಲಸ ಹುಡುಕಿದ್ದಕ್ಕೆ. ಯಾಕೆ ಅಂತ ಗೊತ್ತಿಲ್ಲ. ಬಹುಶಃ ಅದು ಅವರ ಕೇಸನ್ನು ಇನ್ನಷ್ಟು ಗಟ್ಟಿ ಮಾಡ್ತಿತ್ತು. ಅಲ್ಲಿ ಯಾವ್ದೇ ಪ್ರಮಾಣ ಮಾಡೋದಿರ್ಲಿಲ್ಲ, ಮಾತುಕತೆ ಇರ್ಲಿಲ್ಲ, ವಾದ ವಿವಾದ ಇರ್ಲಿಲ್ಲ. ಒಂದೇ ನಿಮಿಷದಲ್ಲಿ ಎಲ್ಲಾ ಮುಗಿದು ಹೋಯ್ತು. ಮತ್ತೆ ನನಗೆ ಹದಿನಾಲ್ಕು ವರ್ಷ ಜೈಲಾಯ್ತು. ಬಿಡುಗಡೆ ಆದ್ಕೂಡ್ಲೇ ಗಡಿಪಾರು ಮಾಡಬಹುದು ಅಂತಾನೂ ಆಯ್ತು. ಆಮೇಲೆ ಜೈಲಿಗೆ ಕಳಿಸಿದ್ರು. ಬಿಡಿ, ಅದ್ರ ಬಗ್ಗೆ ಮಾತಾಡೋದು ಬೇಡ. ಕೆಲವು ತಿಂಗಳ ನಂತ್ರ 'ಬೇಗ ಬಿಡುಗಡೆ ಮಾಡ್ತಿದ್ದೀವಿ' ಅಂತ ಸ್ವಾಥವೇನ್‌ನಲ್ಲಿರೋ ಡಂಗ್ವೆಲ್ ಡಿಟೆನ್ಶನ್ ಸೆಂಟರ್‌ಗೆ ಕಳಿಸಿದ್ರು. ಗಡಿಪಾರು ಮಾಡ್ಬೇಕಾದ ಜನರನ್ನೆಲ್ಲ ಹಿಡಿದಿಡೋ ಜಾಗ ಅದು. ಅಲ್ಲಿಂದ ಮತ್ತೊಂದು ವಲಸೆ ನಿವಾರಣಾ ಕೇಂದ್ರಕ್ಕೆ ಕಳಿಸಿದ್ರು. ಅನೇಕ ತಿಂಗಳ ನಂತರ ಸ–ಕ್ಕೆ ಕಳಿಸಿದ್ರು. ನಾನು ಈಗ ಇರೋದು ಅಲ್ಲೇ – ಅದೇ ಅರ್ಜಿ ಸಲ್ಲಿಸೋದು, ಅದು ತಿರಸ್ಕಾರ ಆಗೋದು, ಮತ್ತೆ ಅರ್ಜಿ... ಅಂತ ಚಕ್ರದಲ್ಲಿ ಸಿಕ್ಕಿಕೊಂಡು ಎಷ್ಟು ವರ್ಷದಿಂದ ಇಲ್ಲಿ ಇದ್ದೇನೆ ಅಂದ್ರೆ ಈ ಕೇಂದ್ರಕ್ಕೆ ಬರುವವರು ಹೋಗುವವರು ಎಲ್ಲಾ ನನ್ನ ಕೆಳಗೇ ಇರೋದು ಅಂತ ಅನಿಸಿಬಿಡ್ತದೆ. ಎಲ್ರೂ ಅವರವರ ಪಾಲಿನ ಸ್ವಚ್ಛತಾ ಕೆಲ್ಸ ಮಾಡಿದ್ರಾ ಅಂತ ಖಾತ್ರಿ ಮಾಡ್ಕೊಳ್ತಿರ್ತೇನೆ. ಯಾರೂ ಗಲಾಟೆ ಮಾಡೋದಿಲ್ಲ. ಎರಿಟ್ರಾದ ಇಬ್ಬರು ಇದ್ದಾರೆ ಇಲ್ಲಿ. ಹುಡುಗರು. ಒಬ್ಬ ಐವರಿ ಕೋಸ್ಟ್‌ನವನು, ಇನ್ನೊಬ್ಬ ರಷ್ಯನ್. ಹೌದು, ಬಿಳಿ ಮನುಷ್ಯ... ರಷ್ಯಾದವನು. ಟಾರ್ಟರ್ ಅಥ್ವಾ ಚಚನ್ ತರದ ರಷ್ಯನ್ ಅಲ್ಲ. ಅಪ್ಪಟ ಬಿಳಿಯ. ಈ ತರ ಆಫ್ರಿಕದ ಕೀಳು ಮಂದಿ ಜೊತೆ ಇಡುವಂತಹದ್ದು ನಾನು ಏನು ಮಾಡಿದ್ದೇನೆ ಅಂತ ಅವ್ನು ಯೋಚಿಸ್ತಿರಬಹುದು ಅಂತ ಕೆಲವೊಮ್ಮೆ ಅನಿಸ್ತದೆ ನನ್ಗೆ.

ಪೊಲೀಸರು ನನ್ನನ್ನು ಬಂಧಿಸಿದಾಗ, ನ್ಯಾಯಾಲಯ ಅವಸರದಲ್ಲಿ ಶಿಕ್ಷೆ ವಿಧಿಸಿದಾಗ ನನ್ನ ಸಾಮಾನುಗಳು, ದಾಖಲೆಗಳು ಯಾವ್ದನ್ನೂ ತೆಗೊಳ್ಳೋಕೆ ಸಮಯ ಸಿಗ್ಲಿಲ್ಲ. ನನ್ನ ದಾಖಲೆಗಳೆಲ್ಲ ಎಲ್ಲಿ ಅಂತ ಕೇಳಿದೆ ನಾನು. ಅಲ್ಲೇನೂ ಇರ್ಲಿಲ್ಲ ಅಂದ್ರು. ನನ್ನ ಬಂಧನ ಆದ್ಮೇಲೆ ಎಲ್ಲಾನೂ ಖಾಲಿ ಮಾಡಿದ್ರು ಅವ್ರು– ಹೆಂಡತಿ ಮಕ್ಕಳ ಫೋಟೊ, ಶಾಲೆ ಪ್ರಮಾಣಪತ್ರಗಳು, ಜನ್ಮ ದಾಖಲೆ, ಅಡ್ರೆಸ್ ಪುಸ್ತಕ. ಅವನ್ನೆಲ್ಲ ಕಸದ ಬುಟ್ಟಿಗೆ ಎಸೆದಿರಬೇಕು. ಗೃಹ ಮಂತ್ರಾಲಯ ನನ್ನ ಗಡಿಪಾರು ಮಾಡಿಸ್ಬೇಕು ಅಂತಾನೇ ಎಂಬಸಿಗೆ ಹೋಗಿ ಪ್ರಯಾಣ ದಾಖಲೆ ತರೋಕೆ ಹೇಳಿ ಲಂಡನ್‌ಗೆ ಹೋಗೋ ಖರ್ಚು ಕೂಡ ನೋಡ್ಕೊಂಡಾಗ ನಾನು ಘ–ದವನು ಅಂತ ಸಾಬೀತು ಮಾಡೋ ಯಾವ ಕಾಗದಾನೂ ನನ್ನಲ್ಲಿರ್ಲಿಲ್ಲ. ಹಾಗಂತ ಅವ್ರು ನನ್ನ ಮತ್ತೆ ಮತ್ತೆ ಎಂಬಸಿಗೆ ಕಳಿಸೋದು ಮಾತ್ರ ನಿಲ್ಲಲಿಲ್ಲ ಅನ್ನೋದಂತೂ ನಿಮ್ಗೆ ಗೊತ್ತೇ ಇದೆ. ಬಹುಶಃ ನಾನು ತುಂಬ ಪ್ರಯತ್ನಿಸ್ತಿದ್ದೆ ಅಂತ ಅವ್ರಿಗೆ ಅನಿಸ್ಲಿಲ್ಲ, ಅಥ್ವಾ ಅಂತಹ ಯೋಚ್ನೆ ಏನೂ ಅವರಿಗಿರ್ಲಿಲ್ಲ ಬಹುಶಃ – ಕ್ರೂರವಾಗಿರೋ ರೀತಿ ಪ್ರೋಗ್ರಾಂ ಮಾಡಿದ ಯಂತ್ರದ ಹಾಗೆ.

ಹೇಳಿದ್ನಲ್ಲ, ಹನ್ನೆರಡು ವರ್ಷಗಳಿಂದ ಇಲ್ಲಿದ್ದೇನೆ ಅಂತ. ಇನ್ನೂ ಕೆಲ್ಸ ಮಾಡೋದಕ್ಕೆ ಅನುಮತಿ ಕೊಟ್ಟಿಲ್ಲ. ಚರ್ಚ್‌ನಲ್ಲಿ ಸಹಾಯ ಮಾಡ್ತೇನೆ ನಾನು; ಹಾಸ್ಟೆಲ್ ವಾಸಿಗಳಿಗೆ ಸಲಹೆ ನೀಡೋ ಸಂಸ್ಥೆಯ ಸ್ವಯಂಸೇವಕ ಕೂಡ. ಇಲ್ಲಿರೋರೆಲ್ಲ ಬಹುತೇಕವಾಗಿ ಕುಡುಕರು ಅಥವಾ ಹಿಂದೆ ಅಪರಾಧ ಎಸಗಿದವರು. ಈ ಕೆಲ್ಸ ಮಾಡೋದಕ್ಕೆ ನನ್ಗೆ ಹದಿನೆಂಟು ತಿಂಗ್ಳು ಟ್ರೇನಿಂಗ್ ಕೊಟ್ಟಿದ್ದಾರೆ. ಹೀಗಾಗಿ, ನಾನು ಸಲಹೆಗಾರನಾಗೋ ಅರ್ಹತೆ ಇದ್ದವ್ನು. ಒಂದು ಎಕ್ಸೆಸ್ ಕೋರ್ಸ್‌ಗೆ ನೋಂದಾಯಿಸಿಕೊಂಡಿದ್ದೆ. ಆದ್ರೆ ನನ್ನ ಸ್ಥಾನ ಎಂಥದ್ದು ಅಂದ್ರೆ ವಿದ್ಯಾರ್ಥಿ